✆ GKVK. 2330153-250
✆ Direct : 23332765

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು-65

ಸಂ.ಆಅ/ವಿ-2/ಟೆಂಡರ್ ಪ್ರಕಟಣೆ/ಅಂಗಡಿ ಮಳಿಗೆಗಳು/ಗಾಕೃವಿಕೇಂದ್ರ/2024-25 ದಿನಾಂಕ : 13-03-2025

ಗೆ,

ಮುಖ್ಯ ಕೇಂದ್ರ (AKMU)
ಕೃಷಿ ವಿಶ್ವವಿದ್ಯಾನಿಲಯ,
ಗಾಕೃವಿಕೇ, ಬೆಂಗಳೂರು-65.

ಮಾನ್ಯರೇ,

ವಿಷಯ : ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯ ಉಪಹಾರ ಮಂದಿರದ ಕಟ್ಟಡದಲ್ಲಿ ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲು ಕರೆದಿರುವ ಟೆಂಡರ್ ಅಧಿಸೂಚನೆ-ಕುರಿತು.

ಉಲ್ಲೇಖ : ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲು ಟೆಂಡರ್ ಪ್ರಕಟಣೆ ದಿನಾಂಕ : 12-03-2025.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಆವರಣದಲ್ಲಿರುವ ಮುಖ್ಯ ಉಪಹಾರ ಮಂದಿರದ ಕಟ್ಟಡದಲ್ಲಿ ಅಂಗಡಿ ಮಳಿಗೆಗಳ ಟೆಂಡರ್ ಪ್ರಕಟಣೆಯನ್ನು ಕೃಷಿ ವಿಶ್ವದ್ಯಾನಿಲಯದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಈ ಮೂಲಕ ತಿಳಿಸಲಾಗಿದೆ.

ಇದನ್ನು ಅತ್ಯಂತ ತುರ್ತು ಎಂದು ಪರಿಗಣಿಸತಕ್ಕದ್ದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಆಸ್ತಿ ಅಧಿಕಾರಿಗಳು

ಅಡಕ: ಟೆಂಡರ್ ಪ್ರಕಟಣೆ ಪ್ರತಿ

ಪ್ರತಿಯನ್ನು:
1) ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು-65-ರವರ ಮಾಹಿತಿಗಾಗಿ.
2) ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃವಿವಿ, ಗಾಕೃವಿಕೇ, ಬೆಂಗಳೂರು-65-ರವರ ಮಾಹಿತಿಗಾಗಿ.
3) ಕಛೇರಿ ಕಡತಕ್ಕೆ.

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ

**ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲು ಟೆಂಡರ್ ಪ್ರಕಟಣೆ ದಿನಾಂಕ : 12-03-2025**

ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಆವರಣದ ಉಪಹಾರ ಮಂದಿರ ಕಟ್ಟಡದಲ್ಲಿ 100 ಚದರ ಅಡಿ ವಿಸ್ತೀರ್ಣದ ಎರಡು ಅಂಗಡಿ ಮಳಿಗೆಗಳನ್ನು ಮಾಸಿಕ ಬಾಡಿಗೆಯ ಮೇಲೆ ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಷರತ್ತಿಗೊಳಪಟ್ಟು 2 ವರ್ಷಗಳ ಅವಧಿಗೆ ನೀಡಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅಂಗಡಿಯ ವಿವರಗಳು:

1) ಛಾಯಾ ಪ್ರತಿ, ಬೆರಳಚ್ಚು ಮಳಿಗೆ ಸಂಖ್ಯೆ-5

2) ಜನರಲ್ ಹಾಗೂ ಕಂಪ್ಯೂಟರ್ಸ್ ಮಳಿಗೆ ಸಂಖ್ಯೆ-7

**ಶೆಡ್ಯೂಲ್ ವಿವರ**

| | | |
|---|---|---|
| 1) | ಟೆಂಡರ್ ಫಾರಂ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ. | ದಿನಾಂಕ: 26-03-2025 ಮಧ್ಯಾಹ್ನ 12.30 ಗಂಟೆಯವರೆಗೆ |
| 2) | ಖಾಲಿ ಟೆಂಡರ್ ಫಾರಂ ನೀಡುವ ಪ್ರಾರಂಭಿಕ ದಿನಾಂಕ. | ದಿನಾಂಕ: 17-03-2025 ಬೆಳಿಗ್ಗೆ 9.00 ಗಂಟೆಯಿಂದ |
| 3) | ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ. | ದಿನಾಂಕ: 26-03-2025 ಮಧ್ಯಾಹ್ನ 2.00 ಗಂಟೆಯವರೆಗೆ |
| 4) | ಟೆಂಡರನ್ನು ತೆರೆಯುವ ದಿನಾಂಕ. | ದಿನಾಂಕ: 26-03-2025 ಮಧ್ಯಾಹ್ನ 3.00 ಗಂಟೆಗೆ |

ಆಸಕ್ತಿಯುಳ್ಳ ಅರ್ಜಿದಾರರು ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅನುಭವ ಪ್ರಮಾಣ ಪತ್ರ ಹಾಗೂ ಸಕ್ಷಮ ಪ್ರಾಧಿಕಾರವು ನೀಡಿರುವ ಪರವಾನಗಿ ಪತ್ರದ ಪ್ರತಿಯೊಂದಿಗೆ ನಿಗದಿತ ಅಂಗಡಿ ಮಳಿಗೆಗೆ ಅರ್ಜಿ ನೀಡಬೇಕು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅರ್ಜಿಯೊಂದಿಗೆ ಖಾಲಿ ಟೆಂಡರ್ ಫಾರಂನ ಬೆಲೆ ರೂ.1,000=00 ಗಳ ಡಿಡಿಯನ್ನು **"ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು-65"** ಇವರ ಹೆಸರಿಗೆ ಪಡೆದು ಸಲ್ಲಿಸುವುದು. ಬೇರೆ ಬೇರೆ ಮಳಿಗೆಗಳಿಗೆ ಪ್ರತ್ಯೇಕವಾದ ಅರ್ಜಿಗಳನ್ನು ಪಡೆಯಬೇಕಾಗಿರುತ್ತದೆ. **ರೂ.50,000=00** ಗಳನ್ನು ಮುಂಗಡ ಭದ್ರತಾ ಠೇವಣಿಯಾಗಿ ಟೆಂಡರ್ ಫಾರಂ ಜೊತೆ ಸಲ್ಲಿಸಬೇಕಾಗಿರುತ್ತದೆ. ಮುಂಗಡ ಭದ್ರತಾ ಹಣವನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಬೆಂಗಳೂರು, ಇವರ ಹೆಸರಿಗೆ ಪಡೆದು ಟೆಂಡರ್ ಫಾರಂ ಜೊತೆ ಲಗತ್ತಿಸುವುದು. ಅಂಗಡಿ ಮಳಿಗೆಗಳ ಹಂಚಿಕೆಯ ನಿಯಮಗಳು ಮತ್ತು ಕರಾರಿನ ನಿಯಮಗಳನ್ನು ಟೆಂಡರ್ ಫಾರಂ ಜೊತೆಯಲ್ಲಿ ಪಡೆಯಬಹುದು. ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.

ಆಸ್ತಿ ಅಧಿಕಾರಿಗಳು

ಆಸ್ತಿ ಅಧಿಕಾರಿಗಳು
ಕೃಷಿ ವಿಶ್ವವಿದ್ಯಾನಿಲಯ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಬೆಂಗಳೂರು—560 065